**ಕರ್ನಾಟಕ ಸರ್ಕಾರ**

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ:67/2015-16 ದಿ: 07-10-2016

ಉಪಸ್ಥಿತರು: ಬಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

ಲಕ್ಷ್ಮೀಕಾಂತ ತಂದೆ: ದೊಡ್ಡ ಯಂಕಪ್ಪ
ತಾಳೂರು ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

1) ಮಲ್ಲಪ್ಪ ತಂದೆ: ದೊಡ್ಡ ಯಂಕಪ್ಪ
ತಾಳೂರು ಗ್ರಾಮ ಸಿರುಗುಪ್ಪ ತಾಲೂಕ
2) ಬಂಗ್ಲೆ ಮಲ್ಲಿಕಾರ್ಜುನ ಜಾಯಿ:ಉಮಾ ಮಹೇಶ್ವರಿದೇವಿ
ಸಿರುಗುಪ್ಪ, ತಾಲೂ: ಸಿರುಗುಪ್ಪ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ.ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ತಾಳೂರು ಗ್ರಾಮ | 198A/3 | 0-20 | H-97 / 2014-15 | 295/2014-15 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ತಾಳೂರು ಗ್ರಾಮದ ಸ.ನಂ.198A/3** ವಿಸ್ತೀರ್ಣ **0-20 ಸೆಂಟ್ಸ್** ಜಮೀನುಗಳಿಗೆ ಸಂಭಂದಿಸಿದಂತೆ **ಪೋತಿವಾರಸತ್ವ ಪ್ರಕಾರ ಲಕ್ಷ್ಮೀಕಾಂತ ತಂದೆ: ದೊಡ್ಡ ಯಂಕಪ್ಪ, ತಾಳೂರು ಗ್ರಾಮ** ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ **ಮಲ್ಲಪ್ಪ ತಂದೆ; ದೊಡ್ಡ ಯಂಕಪ್ಪ ವಾಸ: ತಾಳೂರು ಇವರು ದಿ: 12-05-2015 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:18-03-2016, 13-05-2016, 05-08-2016 ಮತ್ತು 16-09-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು :-

ವಾದಿಗಳಾದ ಕೆ.ಲಕ್ಷ್ಮೀಕಾಂತ ತಂದೆ: ದೊಡ್ಡ ಯಂಕಪ್ಪ ತಾಳೂರುಗ್ರಾಮ ಇವರು ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20 ಸೆಂಟ್ಸ್ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಮಲ್ಲಪ್ಪ ತಂದೆ: ದೊಡ್ಡ ಯಂಕಪ್ಪ ತಾಳೂರುಗ್ರಾಮ ಹಾಗೂ (ಉಮಾದೇವಿ ಇವರು ದಿ:21-4-2016ರಂದು ಮೃತಪಟ್ಟಿರುತ್ತಾರೆ) ಬಂಗ್ಲೆ ಮಲ್ಲಿಕಾರ್ಜುನ ತಾಯಿ: ಉಮಾ ಮಹೇಶ್ವರಿ ದೇವಿ ಸಿರುಗುಪ್ಪ ಇವರು ತಕರಾರು ಅರ್ಜಿಸಲ್ಲಿಸಿರುತ್ತಾರೆ. ಆದರೆ ಮಲ್ಲಪ್ಪ ಮತ್ತು ಉಮಾಮಹೇಶ್ವರಿ ದೇವಿ ಇವರ ಹಿಸ್ಸಾಭಾಗಕ್ಕೆ ನಮ್ಮ ಕುಟುಂಬ ವಿಭಜನೆ ಪ್ರಕಾರ ಅವರಿಗೆ ಪ್ರತ್ಯೇಕ ಆಸ್ತಿಗಳನ್ನು ಬಿಟ್ಟುಕೊಟ್ಟಿದ್ದು ಇರುತ್ತದೆ. ಅಕ್ಕ ದೇ ಸಹೋದರಿಯರಿಗೆ ವಿವಾಹ ಸಂದರ್ಭದಲ್ಲಿ ಒಡವೆ ಮತ್ತು ಸಾಮಾನು ಸರಂಜಾಮುಗಳನ್ನು ನೀಡಲಾಗಿರುತ್ತದೆ. ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20 ಸೆಂಟ್ಸ್ ಜಮೀನು ನನ್ನ ಹಿಸ್ಸಾಭಾಗಕ್ಕೆ ಸಂಕ್ರಮಿಸಿರುತ್ತದೆ. ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿಹ ಕಿ ಪೋತಿ ವಾರಸತ್ವ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು :-

ಪ್ರತಿವಾದಿಗಳಾದ 1) ಕೆ.ಮಲ್ಲಪ್ಪ ತಂದೆ: ದೊಡ್ಡ ಯಂಕಪ್ಪ ತಾಳೂರು ಗ್ರಾಮ ಇವರು ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20ಸೆಂಟ್ಸ್ ಜಮೀನು ನನ್ನತಾಯಿಯಾದ ಮಲ್ಲಮ್ಮ ಗಂಡ:ದೊಡ್ಡ ಯಂಕಪ್ಪ ಇವರ ಹೆಸರಿನಲ್ಲಿ ಪಟ್ಟ ಇದ್ದು ಮೂಲ ಪಟ್ಟದಾರರು ಪೋತಿಯಾಗಿರುತ್ತಾರೆ. ವಾರಸತ್ವ ಪ್ರಕಾರ ನನ್ನತಮ್ಮನಾದ ಲಕ್ಷ್ಮೀಕಾಂತ ದಿ:12-05-201 ರಂದು ಪೋತಿಹಕ್ಕು ಬದಲಾವಣೆ ಕೋರಿ ಅರ್ಜಿಸಲ್ಲಿಸಿದ ನಂತರ ನಮೂನೆ-21 ಗ್ರಾಮದಲ್ಲಿ ಪ್ರಚುರಪಡಿಸಲಾಗಿ ಈ ಕುರಿತು ತಕರಾರು ಅರ್ಜಿಯು ತಾಲೂಕ ಕಛೇರಿಗೆ ಸಲ್ಲಿಸಿರುವೆ. ಈ ಜಮೀನಿನಲ್ಲಿ ನನಗೂ ಪಾಲು ಬೇಕೆಂದು ದಿ:02-04-2016 ರಂದು ಖುದ್ದು ಹಾಜರಾಗಿ ಕಳೆದ ದಿ:10-6-2016 ರ ವಿಚಾರಣೆ ಅವಧಿಯಲ್ಲಿ ತಮ್ಮ ಹೇಳಿಕೆಯ ದಾಖಲೆ ಬರವಣಿಗೆಯ ಲಿಖಿತ ಹೇಳಿಕೆ ನೀಡಿ ಎಂದು ಹೇಳಿದ್ದರಿಂದ ನನ್ನ ಲಿಖಿತ ಹೇಳಿಕೆಯ ಪ್ರತಿಯನ್ನು ಸಲ್ಲಿಸುತ್ತಿದ್ದೇನೆ. ಹಾಗೂ ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20 ಸೆಂಟ್ಸ್ ಜಮೀನಿಗೆ ಸಂಭಂಧ ಪಟ್ಟಂತೆ ನನ್ನ ಭಾಗಕ್ಕೆ ಕಾನೂನು ರೀತಿ ಎಷ್ಟುಸೆಂಟ್ಸ್ ಭೂಮಿ ಬರುವುದೋ ಅಷ್ಟನ್ನು ನನ್ನ ಹೆಸರಿಗೆ ಆದೇಶಿಸಬೇಕೆಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

ಪ್ರತಿವಾದಿಗಳಾದ 2)ಬಂಗ್ಲೆ ಮಲ್ಲಿಕಾರ್ಜುನ, ಪತ್ರಕರ್ತರು 20ನೇವಾರ್ಡ್, ಸದಾಶಿವನಗರ ಸಿರುಗುಪ್ಪ ಇವರು ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20 ಸೆಂಟ್ಸ್ ಜಮೀನು ನನ್ನ ತಾಯಿಯ ತಾಯಿಯಾದ ಮಲ್ಲಮ್ಮ ಗಂಡ: ದೊಡ್ಡ ಯಂಕಪ್ಪ ಇವರ ಹೆಸರಿನಲ್ಲಿ ಪಟ್ಟ ಇದ್ದು ಮೂಲ ಪಟ್ಟದಾರರು ಪೋತಿಯಾಗಿರುತ್ತಾರೆ. ವಾರಸತ್ವ ಪ್ರಕಾರ ನನ್ನ ತಾಯಿಯ ಎರಡನೇ ತಮ್ಮನಾದ ಲಕ್ಷ್ಮೀಕಾಂತ ದಿ:12-05-2015 ರಂದು ಪೋತಿ ಹಕ್ಕು ಬದಲಾವಣೆಗೆ ಕೋರಿ ಅರ್ಜಿಸಲ್ಲಿಸಿದ ನಂತರ ನಮೂನೆ-21 ನ್ನು ಗ್ರಾಮದಲ್ಲಿ ಪ್ರಚುರ ಪಡಿಸಲಾಗಿ ನನ್ನ ತಾಯಿಯ ಮೊದಲನೆ ತಮ್ಮನಾದ ಮಲ್ಲಪ್ಪ ಇವರು ತಕರಾರು ತಾಲೂಕ ಕಛೇರಿಗೆ ಸಲ್ಲಿಸಿದ್ದಾರೆ. ಇವರಿಬ್ಬರು ಸಲ್ಲಿಸಿದ ನಂತರ ನನ್ನ ತಾಯಿಯಾದ ಉಮಾಮಹೇಶ್ವರಿ ದೇವಿಯವರು ಈ ಜಮೀನಿನಲ್ಲಿ ನನಗೂ ಪಾಲು ಬರಬೇಕೆಂದು ಕರೂರಿನ ನ್ಯಾಯಲಯಕ್ಕೆ ಮನವಿ ಸಲ್ಲಿಸಿದ ನಂತರ ದಿ:02-04-2016 ರಂದು ಖುದ್ದು ತಮ್ಮ ನ್ಯಾಯಾಲಯಕ್ಕೆ ತಮ್ಮ ಮುಂದೆ ಹಾಜರಾಗಿ ಆರೋಗ್ಯ ತೀವ್ರ ಹದಗೆಟ್ಟಿರುವುದರಿಂದ ಇನ್ನು ಮುಂದೆ ಈ ನ್ಯಾಯಾಲಯಕ್ಕೆ ಸಂಭಂಧ ಪಟ್ಟಂತೆ ಎಲ್ಲಾ ವಿಚಾರಣೆ ಆಗುಹೋಗುಗಳಿಗೆ ನನ್ನ ಮಗನಾದ ಮಲ್ಲಿಕಾರ್ಜುನ ಜವಾಬ್ದಾರಿ ವಹಿಸಲಿದ್ದಾರೆ. ಎಂದು ತಮಗೆ ಈಗಾಗಲೇ ಮನವಿ ನೀಡಿರುತ್ತಾರೆ. ಇದಾದ ನಂತರ ನನ್ನ ತಾಯಿಯವರು ದಿ: 21-04-2016 ರಂದು ಮರಣ ಹೊಂದಿರುತ್ತಾರೆ. ಇದಕ್ಕೆ ಸಂಭಂದಪಟ್ಟಂತೆ ಮರಣ ಪ್ರಮಾಣಪತ್ರವನ್ನು ದಿ: 13-05-2016 ರಂದುಖುದ್ದಾಗಿ ನಾನು ತಮ್ಮ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಕಳೆದ ದಿ: 10-6-2016 ರ ವಿಚಾರಣೆ ಅವಧಿಯಲ್ಲಿ ಮುಂದಿನ ನ್ಯಾಯಾಲಯದ ದಿನಾಂಕವಾದ ದಿ:08-07-2016 ರಂದು ತಮ್ಮ ಹೇಳಿಕೆಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಹಾಗೂ ಈಗಾಗಲೇ ನಮ್ಮ ತಾಯಿಯ ವಂಶವೃಕ್ಷವನ್ನು ಹಾಗೂ ಪಾನ್‌ಕಾರ್ಡ್‌ನ್ನು ತಮಗೆ ಸಲ್ಲಿಸಿರುತ್ತೇವೆ. ಸದರಿ ಭೂಮಿಗೆ ಸಂಭಂದಪಟ್ಟಂತೆ ನಮ್ಮ ತಾಯಿಯ ಭಾಗಕ್ಕೆ ಕಾನೂನುರೀತಿ ಎಷ್ಟುಸೆಂಟ್ಸ್ ಭೂಮಿ ಬರುವುದೋ ಅಷ್ಟನ್ನು ನನ್ನ ಹೆಸರಿಗೆ ಆದೇಶಿಸಬೇಕೆಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಗಳಾದ 3) ಸುಮಂಗಳಮ್ಮ ಗಂಡ: ಶಿವಣ್ಣ ಕಮಿಂಗ್ ರೋಡ್ ಬಳ್ಳಾರಿ, ಮತ್ತು ಪ್ರತಿವಾದಿ 4) ಪರಸಮ್ಮ ಗಂಡ: ನಾಗಭೂಷನ ಮಿಲ್ಲರ್‌ಪೇಟೆ ಬಳ್ಳಾರಿ ಇವರು ಸದ್ರಿ ಜಮೀನುಗಳು ನಮ್ಮ ತಾಯಿಯಾದ ಶ್ರೀಮತಿ: ಮಲ್ಲಮ್ಮ ಗಂಡ: ದೊಡ್ಡ ಯಂಕಪ್ಪ ಹೆಸರಿಗೆ ಪಹಣಿ ಪಟ್ಟ ಹೊಂದಿರುತ್ತಾರೆ. ಅವರು ಮರಣ ಹೊಂದಿದ್ದು ನಾವು ನಮ್ಮ ತಂದೆ ತಾಯಿಗೆ 7ಜನ ಮಕ್ಕಳಿದ್ದು ಸದ್ರಿ ಆಸ್ತಿಯು ನಮ್ಮ ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ಆಸ್ತಿಯನ್ನು ನಮಗೆ ತಿಳಿಸದೇ ನನ್ನ ತಮ್ಮನಾದ ಲಕ್ಷ್ಮೀಕಾಂತ ತಂದೆ: ಲೇಟ್ ದೊಡ್ಡ ಯಂಕಪ್ಪ ಇವರು ತಮ್ಮ ಹೆಸರಿಗೆ ಮುಟೇಷನ್ ಮಾಡಿಕೊಳ್ಳಲು ಬಂದಿರುವುದಾಗಿ ನಮ್ಮ ಗಮನಕ್ಕೆ ಕಂಡು ಬಂದಿರುತ್ತದೆ ಸದರಿ ಆಸ್ತಿಯಲ್ಲಿ ನಮಗೂ ಸಹ ಭಾಗ ಇರುತ್ತದೆ. ಸದರಿ ಜಮೀನು ಮುಟೇಷನ್ ಆಗದಂತೆ ತಡೆಹಿಡಿಯಬೇಕೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20 ಸೆಂಟ್ಸ್ ಜಮೀನು ಹಾಲಿ ಪಹಣಿಯಲ್ಲಿರುವ ಮಲ್ಲಮ್ಮ ಗಂಡ: ದೊಡ್ಡಯಂಕಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವನೆ ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ತಾಳೂರು ಗ್ರಾಮದ ಸ.ನಂ.198A/3 ವಿಸ್ತೀರ್ಣ 0-20 ಸೆಂಟ್ಸ್ ಜಮೀನು ಯಥಾಸ್ಥಿತಿಯಲ್ಲಿ ಇಡಲು ಹಾಲಿ ಪಹಣಿಯಲ್ಲಿರುವ ಮಲ್ಲಮ್ಮ ಗಂಡ: ದೊಡ್ಡ ಯಂಕಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 07-10-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

07/10/16

ಉಪ ತಹಶೀಲ್ದಾರರು,
ಉಪತಹಶೀಲ್ದಾರರು, ತಾಲೂಕು ಕಾರ್ಯಾಲಯ, ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.